

# ಕಚ ಮತ್ತು ದೇವಯಾನಿ

ಕಥೆ: ಸ್ವಾಮಿ ರಾಘವೇಶಾನಂದ    ಚಿತ್ರ: ಶಂಕರ್


ಕಚನು ದೇವತೆಗಳ ಗುರುವಾದ ಬೃಹಸ್ಪತಿಯ ಮಗ. ದೇವಯಾನಿಯು ದಾನವರ ಗುರುವಾದ ಶುಕ್ರಾಚಾರ್ಯರ ಮಗಳು. ಶುಕ್ರಾಚಾರ್ಯರಿಗೆ ಸತ್ತವರನ್ನು ಬದುಕಿಸುವ ಸಂಜೀವಿನಿ ಮಂತ್ರ ಗೊತ್ತಿತ್ತು. ಒಮ್ಮೆ ದೇವತೆಗಳಿಗೂ ಮತ್ತು ದಾನವರಿಗೂ ಘೋರವಾದ ಯುದ್ಧವಾಯಿತು. ಶುಕ್ರಾಚಾರ್ಯರು ಸತ್ತ ದಾನವರೆಲ್ಲರನ್ನೂ ಮತ್ತೆ ಮತ್ತೆ ಬದುಕಿಸಿ ಅವರಿಗೆ ವಿಜಯವನ್ನು ತಂದುಕೊಟ್ಟರು. ದೇವತೆಗಳಿಗೆ ಚಿಂತೆಗಿಟ್ಟುಕೊಂಡಿತು.




ದಾನವರು, ಕರೆಯದೆ ಬಂದಿರುವ ಈ ಅತಿಥಿಯನ್ನು ಇಷ್ಟಪಡಲಿಲ್ಲ. ಇವನು ಸಂಜೀವಿನೀ ಮಂತ್ರವನ್ನು ಕಲಿತು ದೇವಲೋಕಕ್ಕೆ ಮರಳುವನೆಂದು ಶಂಕಿಸಿ ಹೆದರಿದರು. ಒಂದು ದಿನ ಕಚ ಒಬ್ಬನೇ ಕಾಡಿನಲ್ಲಿ ಗೋವುಗಳನ್ನು ಮೇಯಿಸುತ್ತಿದ್ದಾಗ ಅವನನ್ನು ಕಡಿದು ಚೂರುಚೂರಾಗಿ ಕತ್ತರಿಸಿ ಅವರ ನಾಯಿಗಳಿಗೆ ತಿನ್ನಿಸಿದರು.




ದೇವಯಾನಿ ಕಣ್ಣೀರಿಡುತ್ತಾ ತಂದೆಯ ಬಳಿ ಬಂದಳು.





ಶುಕ್ರಾಚಾರ್ಯರು ಸಂಜೀವಿನೀ ಮಂತ್ರವನ್ನು ಉಚ್ಚರಿಸಿದರು. ಏನು ಅದ್ಭುತ ಆಶ್ಚರ್ಯ! ಕಚ ನಾಯಿಗಳ ದೇಹವನ್ನು ಸೀಳಿಕೊಂಡು ಹೊರಬಂದನು.




ಮತ್ತೊಂದು ದಿನ ಕಚ ದೇವಯಾನಿಗೋಸ್ಕರ ಹೂವು ಬಿಡಿಸಲು ಹೊರಟಿದ್ದ. ಅಸುರರು ಮತ್ತೊಮ್ಮೆ ಅವನನ್ನು ಸಾಯಿಸಿ ಅವನ ಅವಶೇಷಗಳೆಲ್ಲವನ್ನೂ ಸಮುದ್ರದ ನೀರಿನಲ್ಲಿ ಕದಡಿಬಿಟ್ಟರು.




ದೇವಯಾನಿಗೆ ಮತ್ತೆ ಚಿಂತೆಯಾಯಿತು.
ಕಚನಿಲ್ಲದೆ ನಾನು ಊಟ ಮಾಡಲಾರೆ.
8
ಚಿಂತಿಸಬೇಡ, ಮತ್ತೊಮ್ಮೆ ನಾನು ಅವನನ್ನು ಬದುಕಿಸುತ್ತೇನೆ.
ಸಮುದ್ರದ ಅಲೆಗಳಿಂದ ಕಚ ಎದ್ದು ಬಂದು ದೇವಯಾನಿಯಿದ್ದಲ್ಲಿಗೆ ಹಿಂದಿರುಗಿದನು.
9
ಕ್ಷೇಮ ತಾನೇ?
ಗುರುವಿನ ಕೃಪೆಯಿಂದ ಕ್ಷೇಮ.
ಮೂರನೇ ಬಾರಿ ದಾನವರು ಅವನನ್ನು ಸಾಯಿಸಿ ಅವನ ಹೆಣವನ್ನೆಲ್ಲ ಪುಡಿ ಪುಡಿ ಮಾಡಿದರು. ಆ ಪುಡಿಯನ್ನು ಮದ್ಯದಲ್ಲಿ ಬೆರಸಿ ಅದನ್ನು ಶುಕ್ರಾಚಾರ್ಯರಿಗೆ ಕೊಟ್ಟರು.
10
ಹಾ! ಹಾ! ಹಾ! ಈಗ ನೋಡೋಣ ಅವರು ತಮ್ಮ ಶಿಷ್ಯನನ್ನು ಹೇಗೆ ಬದುಕಿಸುತ್ತಾರೆಂದು.
ಇದು ಒಳ್ಳೆಯ ಉಪಾಯ!
ಮತ್ತೆ ದೇವಯಾನಿ ತಂದೆಯ ಬಳಿ ಬಂದು ಅತ್ತಳು. ಶುಕ್ರಾಚಾರ್ಯರಿಗೆ ಕಚ ತನ್ನ ಹೊಟ್ಟೆಯಲ್ಲೇ ಇರುವುದು ತಿಳಿದು ಖೇದವಾಯಿತು.
11
ಕಚ! ಈಗ ನಾನು ನಿನಗೆ ಸಂಜೀವಿನೀ ಮಂತ್ರವನ್ನು ಹೇಳಿಕೊಡುತ್ತೇನೆ. ನಾನು ಆ ಮಂತ್ರವನ್ನು ಉಚ್ಚರಿಸಿದ ನಂತರ ನನ್ನ ಹೊಟ್ಟೆಯನ್ನು ಸೀಳಿಕೊಂಡು ಹೊರಬರುವೆ. ಆಗ ನಾನು ಸಾಯುವೆ. ಆದರೆ ನೀನು ಅದೇ ಮಂತ್ರವನ್ನು ಉಚ್ಚರಿಸಿ ನನ್ನನ್ನು ಬದುಕಿಸು.


ಅದರಂತೆಯೇ ಕಚ ತನ್ನ ಗುರುವಿನ ಹೊಟ್ಟೆಯಿಂದ ಹೊರಬಂದು ಸತ್ತುಹೋಗಿದ್ದ ತನ್ನ ಗುರುವನ್ನು ಬದುಕಿಸಿದ.
12
13
ಕಚ! ಸಂಜೀವಿನಿ ಮಂತ್ರವನ್ನು ನೀನು ಕಲಿಯಬಾರದೆಂದು ಈ ದಾನವರು ನಿನಗೆ ಎಲ್ಲ ರೀತಿಯಲ್ಲಿ ಹಾನಿ ಮಾಡಿದರು. ಆದರೆ ಅವರು ನಿನ್ನನ್ನು ಈ ರೀತಿ ಕೊಂದದ್ದೇ ನಿನಗೆ ವರವಾಗಿ ಪರಿಣಮಿಸಿದೆ. ಈಗ ನಿನ್ನಾಸೆ ಪೂರ್ಣವಾಗಿದೆ. ದೇವಲೋಕಕ್ಕೆ ಸಂತೋಷದಿಂದ ಹೋಗಬಹುದು.
ಗುರುಗಳೇ ನನ್ನನ್ನು ಆಶೀರ್ವದಿಸಿ.
ದೇವಯಾನಿಯಿಂದ ಬೀಳ್ಕೊಡುವಾಗ.......
ಕಚ! ನಿನ್ನನ್ನು ನಾನು ಬಹಳ ಪ್ರೀತಿಸುತ್ತೇನೆ. ನನ್ನನ್ನು ಕೈ ಬಿಡಬೇಡ!
ಇಲ್ಲ ತಂಗಿ! ಈಗ ನಾನು ನಿಮ್ಮ ತಂದೆಯ ಹೊಟ್ಟೆಯಿಂದ ಹೊರಬಂದಿರುವುದರಿಂದ ನಿನಗೆ ನಾನು ಸಹೋದರನಾಗುತ್ತೇನೆ. ನನಗೆ ಶುಭವನ್ನು ಬಯಸಿ ಬೀಳ್ಕೊಡು. ದೇವರು ನಿನ್ನನ್ನು ಹರಸಲಿ!
14
ಕಚ ಸಂಜೀವಿನಿ ಮಂತ್ರವನ್ನು ಕಲಿತ ನಂತರ ದೇವಲೋಕಕ್ಕೆ ಹಿಂದಿರುಗಿದನು.
15